153ನೇ6 ನಿ=72ರ (42)
4RR
30.06.24

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು ರವರು ನಿಯಮ 72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಉತ್ತರ**

**ವಿಷಯ:**

ಬೆಂಗಳೂರು ನಗರದಲ್ಲಿ ಅಪ್ಟಿಕಲ್ ಫೈಬರ್ ಕೇಬಲ್‌ಗಳನ್ನು ಅಳವಡಿಸಬೇಕಿದ್ದರೇ, ಬಿಬಿಎಂಪಿಯ ಅನುಮತಿ ಅವಶ್ಯಕತೆ ಇದೆ. ಆದರೆ 2019 ರಂದು ಬಿಬಿಎಂಪಿ ಆಯುಕ್ತರು ಹೊರಡಿಸಿದ್ದ ಆದೇಶದಲ್ಲಿ ನಿಗದಿಪಡಿಸಿರುವ ಶುಲ್ಕಕ್ಕಿಂತ ಕಡಿಮೆ ಶುಲ್ಕ ವಸೂಲಿ ಮಾಡಿರುವುದರಿಂದ ಮೂರು ವರ್ಷಗಳ ಅವಧಿಯಲ್ಲಿ ಪಾಲಿಕೆಗೆ ಸುಮಾರು 86.65 ಕೋಟಿ ರೂ. ನಷ್ಟವುಂಟಾಗಿದೆ. ಇದಲ್ಲದೆ ಇತ್ತೀಚಿನ ನಗರದ ಎಲ್ಲಾ ವಿದ್ಯುತ್ ಕಂಬ ಹಾಗೂ ಮನೆಗಳ ಮಹಡಿಗಳ ಮೇಲೆ ಅನಧಿಕೃತವಾಗಿ ಕೇಬಲ್ ವೈರ್‌ಗಳನ್ನು ಹಾಕಿರುವುದರಿಂದ, ನಗರದ ಎಲ್ಲಾ ಭಾಗಗಳಲ್ಲೂ ಕೇಬಲ್ ವೈರ್‌ಗಳು ನೇತಾಡುತ್ತಿದ್ದು, ರಸ್ತೆ ಬದಿಯ ಮರದಿಂದ ಮರಕ್ಕೆ ಮತ್ತು ಬೀದಿ ದೀಪಗಳ ಕಂಬಗಳಿಗೆ ಕೇಬಲ್‌ಗಳು ನೇತಾಡುತ್ತಿರುವುದರಿಂದ ನಗರದ ಸೌಂದರ್ಯಕ್ಕೆ ಹಾಗೂ ಜೀವಗಳಿಗೆ ಮಾರಣಾಂತಿಕವಾಗಿದ್ದು, ಇದರ ಬಗ್ಗೆ ಯಾವೊಬ್ಬ ಅಧಿಕಾರಿಗಳು ಗಮನಹರಿಸಿಲ್ಲ, ಇದಲ್ಲದೇ ರಸ್ತೆಗಳನ್ನು ಅಗದು ಹಾಕಲಾಗುತ್ತಿರುವ ಕೇಬಲ್‌ಗಳನ್ನು, ಅಳವಡಿಸಿದ ನಂತರ ಅಗದಿರುವ ರಸ್ತೆಗಳನ್ನು ಮುಚ್ಚಬೇಕಾಗಿರುವ ಜವಾಬ್ದಾರಿ ಯಾರದ್ದು? ಹಲವಾರು ಕಡೆಗಳಲ್ಲಿ ಗುಂಡಿಗಳನ್ನು ಮುಚ್ಚಿರುವುದಿಲ್ಲ ಹಾಗೂ ಡಾಂಬರನ್ನು ಸಹ ಹಾಕಿರುವುದಿಲ್ಲ, ಇದರ ಪರಿಶೀಲನೆಯ ಜವಾಬ್ದಾರಿ ಯಾವ ಅಧಿಕಾರಿಯದ್ದು ಈ ಸಾರ್ವಜನಿಕ ಮಹತ್ವದ ವಿಷಯದ ಕುರಿತು.

**ಉತ್ತರ:**

ಆಯುಕ್ತರ ಆದೇಶ ಸಂಖ್ಯೆ: ಆ/ಪಿಎಸ್‌ಆರ್(ಜಿ)/5870/2019-20, ದಿನಾಂಕ: 29-11-2019 ರಂತೆ ಬಿಬಿಎಂಪಿ ವ್ಯಾಪ್ತಿಯಲ್ಲಿ ಬಿಬಿಎಂಪಿಯಿಂದ ಪರವಾನಿಗೆ ಪಡೆದು ರಸ್ತೆ ಕತ್ತರಿಸುವ ಪ್ರಸಂಗಗಳಲ್ಲಿ ರಸ್ತೆ ಕತ್ತರಿಸಿದ ಭಾಗಗಳ ಪುನಶ್ಚೇತನ ಬಿಬಿಎಂಪಿಯ ಜವಾಬ್ದಾರಿಯಾಗಿರುತ್ತದೆ. ಆದೇಶದ ಪ್ರತಿಯನ್ನು **ಅನುಬಂಧ**ದಲ್ಲಿ ಒದಗಿಸಿದೆ. ಮುಂದುವರೆದು, ಹೆಚ್.ಡಿ.ಡಿ. ಮಾದರಿಯಲ್ಲಿ ಪ್ರತಿ ಮೀಟರ್‌ಗೆ ರೂ. 50/- ಅನ್ನು ಹೆಚ್ಚುವರಿ ಭದ್ರತಾ ಠೇವಣಿಯನ್ನಾಗಿ ಪಡೆದುಕೊಳ್ಳಲು ಹಾಗೂ ಅನುಮತಿ ಪತ್ರದಲ್ಲಿರುವುದಕ್ಕಿಂತ ಹೆಚ್ಚಿನ ಗುಂಡಿ ತೋಡಿದಲ್ಲಿ ಸದರಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲು ಆದೇಶಿಸಲಾಗಿದೆ.

ಲೆಕ್ಕ ಪರಿಶೋಧಕರು ದಿನಾಂಕ: 17-09-2018ರ ಆದೇಶವನ್ನು ಉಲ್ಲೇಖಿಸಿ ಆಕ್ಷೇಪಿಸಿರುವಂತೆ ಓ.ಎಫ್.ಸಿ ಅಳವಡಿಕೆ ನಿಗದಿತ ಶುಲ್ಕಕಿಂತ ಕಡಿಮೆ ಶುಲ್ಕ ವಸೂಲಿಸಿ ಆದಾಯ ನಷ್ಟವಾಗಿರುವುದು ಎಂದು ತಿಳಿಸಿರುವ ಮೊತ್ತವು ಭದ್ರತಾ ಠೇವಣಿಯ ಮೊತ್ತವಾಗಿದ್ದು, ಭದ್ರತಾ ಠೇವಣಿಯು ಪಾಲಿಕೆಗೆ ಆದಾಯವಾಗಿರುವುದಿಲ್ಲ. ಬದಲಿಗೆ ಸಂಸ್ಥೆಗಳಿಗೆ ಹಿಂತಿರುಗಿಸುವ ಮೊತ್ತವಾಗಿದ್ದು ಇದರಿಂದ ಪಾಲಿಕೆಗೆ ಯಾವುದೇ ರೀತಿಯ ಆದಾಯ ನಷ್ಟವಾಗಿರುವುದಿಲ್ಲ.

ಸೇವಾ ಸಂಸ್ಥೆಯವರು ರಸ್ತೆಗಳನ್ನು ಅಗೆದು ಕೇಬಲ್‌ಗಳನ್ನು ಅಳವಡಿಸಿದ ನಂತರ ಅಗೆದಿರುವ ರಸ್ತೆಗಳನ್ನು ವಾಹನ ಸಂಚಾರಕ್ಕೆ ಅನುವು ಮಾಡಿಕೊಡುವುದು ಸಂಬಂಧಪಟ್ಟ ಸೇವಾ ಸಂಸ್ಥೆಯವರ ಜವಾಬ್ದಾರಿಯಾಗಿರುತ್ತದೆ. ರಸ್ತೆ ಪುನಶ್ಚೇತನ (ಡಾಂಬರೀಕರಣ) ಮಾಡಲು ಬಿಬಿಎಂಪಿಗೆ ಶುಲ್ಕವನ್ನು ಸೇವಾ ಸಂಸ್ಥೆಯವರು ಪಾವತಿಸುತ್ತಿದ್ದು, ಇದರ ಪರಿಶೀಲನೆಯನ್ನು ಓ.ಎಫ್.ಸಿ ನಿಗದಿತ ಸಾಮಾನ್ಯ ಕಾರ್ಯವಿಧಾನ ಕಲಂ 6ರ ಪ್ರಕಾರ ಸಂಬಂಧಪಟ್ಟ ಜುರಿಸ್‌ಡಿಕ್ಷನಲ್ ಇಂಜಿನಿಯರ್ ಜವಾಬ್ದಾರಿಯಾಗಿರುತ್ತದೆ. ಪಾಲಿಕೆ ವ್ಯಾಪ್ತಿಯಲ್ಲಿ ರಸ್ತೆ ಬದಿಯ ಮರದಿಂದ ಮರಕ್ಕೆ ಮತ್ತು ಬೀದಿ ದೀಪಗಳ ಕಂಬಗಳ ಮೇಲೆ ಓ.ಎಫ್.ಸಿ ಕೇಬಲ್‌ಗಳನ್ನು ಅಳವಡಿಸಲಾಗಿರುವುದನ್ನು ಆಗಿಂದ್ದಾಗೆ ಕಾರ್ಯಾಚರಣೆ ಕೈಗೊಂಡು ತೆರವುಗೊಳಿಸಲಾಗುತ್ತಿರುತ್ತದೆ.

**ನಅಇ 349 ಎಂಎನ್‌ವೈ 2024**

(ಸಹಿ)

**(ಡಿ.ಕೆ.ಶಿವಕುಮಾರ್)**
ಉಪ ಮುಖ್ಯಮಂತ್ರಿ